## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಬಸಯ್ಯ ಹಿರೇಮಠ್, ಹಿಂದಿನ (ಪ್ರ) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸುರಪುರ, ಯಾದಗಿರಿ ಜಿಲ್ಲೆ, ಇವರ ಅಮಾನತ್ತು ತೆರವುಗೊಳಿಸಿ ಸೇವೆಗೆ ಮನರ್ ಸ್ಥಾಪಿಸುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 233 ವಿಸೇಬಿ 2015 ದಿ 08.09.2015.
2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 233 ವಿಸೇಬಿ 2015 ದಿ 14.12.2015.
3) ಶ್ರೀ ಬಸಯ್ಯ ಹಿರೇಮಠ್ ಇವರ ಮನವಿ ದಿ 28.12.2015.

---------

**ಪ್ರಸ್ತಾವನೆ:-**

ಶ್ರೀ ಬಸಯ್ಯ ಹಿರೇಮಠ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ, ಯಾದಗಿರಿ ಜಿಲ್ಲೆ (ಪ್ರಸ್ತುತ ಅಮಾನತ್ತು) ಇವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಸುರಪುರ ಹುದ್ದೆಯಲ್ಲಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮಹಾತ್ಮಗಾಂಧಿ ನರೇಗಾ ಅಧಿನಿಯಮ 2005 ಕಲಂ-(15)ರಲ್ಲಿ ನಿರ್ಧಿಷ್ಟಪಡಿಸಿರುವಂತೆ ಇವರು ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾರ್ಯಕ್ರಮಾಧಿಕಾರಿಯಾಗಿದ್ದರು. ಅಲ್ಲದೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಯೋಜನೆಯಿಂದ ಸಮರ್ಪಕ ಕಾರ್ಯಾನುಷ್ಠಾನ ಕುರಿತಂತೆ ಆಯುಕ್ತಾಲಯದಿಂದ ಹಲವಾರು ಸೂಚನೆಗಳನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ 03.06.2015ರಂದು ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರೊಂದಿಗೆ ನಡೆಸಿದ ವೀಡಿಯೋ ಸಂವಾದದಲ್ಲಿ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ರವರ ಪರಿಶೀಲನೆಯಂತೆ ಅಗತ್ಯವಿರುವ ಕೂಲಿ ಕಾರ್ಮಿಕರಿಗೆ ಕೂಲಿ ಒದಗಿಸಲು ಕಾಮಗಾರಿಗಳನ್ನು ಹಮ್ಮಿಕೊಳ್ಳುವಂತೆ ಮತ್ತು ಈವರೆವಿಗೂ ಆಗಿರುವ ಕಾಮಗಾರಿಗಳ ಬಾಬ್ತು ಬಾಕಿ ಇರುವ ಕೂಲಿ ಮೊತ್ತವನ್ನು ತಿರುವಳಿ ಮಾಡುವಂತೆ ಸೂಚಿಸಲಾಗಿರುತ್ತದೆ.

ಈ ಮೇಲಿನ ಎಲ್ಲಾ ಆದೇಶವಿದ್ದಾಗ್ಯೂ ದಿನಾಂಕ 29.08.2015ರ ಎಂ.ಐ.ಎಸ್ ಮಾಹಿತಿಯನುಸಾರ ದಿನಾಂಕ 14.08.2015 ರಿಂದ 29.08.2015ರ ಅವಧಿಯಲ್ಲಿ 2014-15ನೇ ಸಾಲಿನ ರೂ.63.05 ಲಕ್ಷ ಮತ್ತು 2015-16ನೇ ಸಾಲಿನ ರೂ.7.82ಲಕ್ಷ ಒಟ್ಟು ರೂ.70.87 ಲಕ್ಷಗಳ ಅಕುಶಲ ಕೂಲಿ ಕಾರ್ಮಿಕರ ಕೂಲಿ ಬಾಕಿ ಉಳಿದಿದ್ದು, ಇವರು ರೂ.3.44 ಲಕ್ಷಗಳ ಕೂಲಿ ಮೊತ್ತವನ್ನು ಮಾತ್ರ ಪಾವತಿಸಲು ಕ್ರಮ ಕೈಗೊಂಡಿರುತ್ತಾರೆ. ಇದರಿಂದಾಗಿ ರೂ.224/-ಗಳ ಕೂಲಿ ಪಾವತಿ ವಿಳಂಬದ ಪರಿಹಾರ ನೀಡಿಕೆಗೆ ಕಾರಣರಾಗಿದ್ದು, ಕೇವಲ 144 ಮಾನವ ದಿನಗಳನ್ನು ಸೃಜಿಸಿ ಶಾಸನಬದ್ಧ ಕರ್ತವ್ಯಲೋಪ ಎಸಗಿ, ಮೇಲಾಧಿಕಾರಿಗಳ ಸೂಚನೆಗಳನ್ನು ಪಾಲಿಸದೆ ಶಾಸನಬದ್ಧ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1)ನ್ನು ಉಲ್ಲಂಘಿಸಿರುವ ಆರೋಪಗಳ ಕುರಿತಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ದಿನಾಂಕ 08.09.2015ರ ಆದೇಶದಲ್ಲಿ, ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ದಿನಾಂಕ 14.12.2015ರಲ್ಲಿ ಸದರಿ ಪ್ರಕರಣ ಕುರಿತಂತೆ, ಶ್ರೀ ಬಸಯ್ಯ ಹಿರೇಮಠ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 12(1)ರಡಿ ಕಾರಣ ಕೇಳುವ ನೋಟಿಸಿನೊಂದಿಗೆ ದೋಷಾರೋಪಣ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಪ್ರತಿಯಾಗಿ ಸದರಿಯವರು ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ದಿನಾಂಕ 28.12.2015ರ ಪತ್ರದಲ್ಲಿ ಸರ್ಕಾರಕ್ಕೆ ಈ ಕೆಳಕಂಡಂತೆ ಲಿಖಿತ ಹೇಳಿಕೆ ಸಲ್ಲಿಸಿ, ತಮ್ಮ ಅಮಾನತ್ತು ಆದೇಶವನ್ನು ಹಿಂದಕ್ಕೆ ಪಡೆದು ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಬೇಕೆಂದು ಕೋರಿರುತ್ತಾರೆ.

1. ತಾವು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಯೊಂದಿಗೆ ಹೆಚ್ಚುವರಿಯಾಗಿ ಕಾರ್ಯನಿರ್ವಾಹಕ ಅಧಿಕಾರಿಯ ಪ್ರಭಾರವನ್ನು ನಿಭಾಯಿಸಿ, ತಾಂತ್ರಿಕ ತೊಂದರೆ, ಸಿಬ್ಬಂದಿ ಕೊರತೆ, ಪರಿಣಿತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕೊರತೆ, ಡಾಟಾ ಎಂಟ್ರಿ ಆಪರೇಟರ್‌ಗಳ ಕೊರತೆ ಇನ್ನಿತರ ಹಲವಾರು ಸವಾಲುಗಳನ್ನು ಎದುರಿಸಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿರುವುದಾಗಿ,

2. 2013-14ನೇ ಸಾಲಿನಲ್ಲಿ 21 ಗ್ರಾಮ ಪಂಚಾಯತ್‌ಗಳು ವಿಶೇಷ ಸಾಮಾಜಿಕ ಲೆಕ್ಕ ಪರಿಶೋಧನೆಗೆ ಒಳಪಟ್ಟ ಕಾರಣ, ಸದರಿ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆಗೊಳಗಾದ ಯಾವುದೇ ಕಾಮಗಾರಿಗಳಿಗೆ ಹಣ ಪಾವತಿಯಾಗಬಾರದೆಂಬ ಸದುದ್ದೇಶದಿಂದ ಮೇಲಾಧಿಕಾರಿಗಳು ಸದರಿ ಗ್ರಾಮ ಪಂಚಾಯತಿಗಳ ಹಣಪಾವತಿಯನ್ನು ತಡೆ ಹಿಡಿದಿದ್ದರು. ಈ ಸಂಬಂಧ ತಪ್ಪಿತಸ್ಥರೆಂದು ಕಂಡು ಬಂದ 20 ಗ್ರಾಮ ಪಂಚಾಯತಿ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಸೇವೆಯಿಂದ ವಜಾಗೊಳಿಸಿದ ಕಾರಣ, ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯು ಲಭ್ಯವಿರದೆ ಇದ್ದುದರಿಂದ,

3. NMR Generate ಮಾಡಲು ಆಧಾರ ಕಾರ್ಡ ಸಂಖ್ಯೆ ಕಡ್ಡಾಯವಾಗಿದ್ದು, ಸುರುಪುರ ತಾಲ್ಲೂಕಿನಲ್ಲಿ ಆಧಾರ ನೊಂದಣಿ ಕಡಿಮೆ ಪ್ರಮಾಣದಲ್ಲಿ ಇದ್ದಿರುವುದು ಪ್ರಗತಿ ಸಾಧಿಸುವಲ್ಲಿ ಸವಾಲಾಗಿತ್ತೆಂದು ಮತ್ತು ತಾಂತ್ರಿಕ ತೊಂದರೆಯಿಂದ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಎನ್.ಎಂ.ಆರ್. ತೆಗೆಯಲು ತೊಂದರೆಯಾಗಿದ್ದು, ಮೇ ಮತ್ತು ಜೂನ್ 7, 2015ರ ವರಗೆ ಸಂಪೂರ್ಣವಾಗಿ ಚುನಾವಣಾ ಕರ್ತವ್ಯದಲ್ಲಿ ರಿಟರ್ನಿಂಗ್ ಅಧಿಕಾರಿ ಎಂದು ನೇಮಿಸಿದ್ದರಿಂದ ಹೆಚ್ಚಿನ ಸಮಯ ಚುನಾವಣಾ ಕರ್ತವ್ಯಕ್ಕೆ ನೀಡಬೇಕಾದ ಅನಿವಾರ್ಯತೆಯಿಂದ ಪ್ರಗತಿಗೆ ಹಿನ್ನೆಡೆಯಾಗಿರುತ್ತದೆ,

4. ದಿನಾಂಕ 14.08.2015 ರಿಂದ 29.08.2015ರ ವರೆಗಿನ ಅವಧಿಯ ಪ್ರಗತಿಯನ್ನು ಮಾತ್ರ ಪರಿಗಣಿಸಿ ತಮ್ಮ ವಿರುದ್ಧ ಕ್ರಮ ಜರುಗಿಸಲಾಗಿದೆ, ಆದರೆ ತಾವು ಕಾರ್ಯನಿರ್ವಹಿಸಿದ ಅವಧಿಯಲ್ಲಿ ಕ್ರಮವಾಗಿ ರೂ.70.07 ಹಾಗೂ ರೂ.18.51 ಲಕ್ಷ ಕೂಲಿ ಹಣವನ್ನು ಪಾವತಿಸಿದ್ದು, 2261 ಮಾನವ ದಿನಗಳನ್ನು ಸೃಜಿಸಿದ್ದು, ಹೆಚ್ಚಿನ ಪ್ರಗತಿ ಸಾಧಿಸಿರುವುದಾಗಿ ತಿಳಿಸಿರುತ್ತಾರೆ.

ಶ್ರೀ ಬಸಯ್ಯ ಹಿರೇಮಠ, ಇವರ ಲಿಖಿತ ಹೇಳಿಕೆಯಲ್ಲಿನ ಅಂಶಗಳ ಕುರಿತು ಪರಿಶೀಲಿಸಲಾಗಿ, ಸದರಿಯವರು ಪಂಚಾಯತ್ ರಾಜ್ ಇಂಜನಿಯರಿಂಗ್ ಉಪವಿಭಾಗ, ಸುರಪುರ ಹುದ್ದೆಯ ಜೊತೆಗೆ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಸುರಪುರ ಹುದ್ದೆಯು ಖಾಲಿಯಿದ್ದ ಕಾರಣ, ಹೆಚ್ಚುವರಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಕಾರ್ಯನಿವಾಹಕ ಅಧಿಕಾರಿ ಹುದ್ದೆಯು ಹೆಚ್ಚಿನ ಕಾರ್ಯ ಒತ್ತಡ ಹೊಂದಿರುವುದರಿಂದ, ಹಾಗೂ ಎರಡು ಹುದ್ದೆಗಳಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ, ಅಧೀನ

ಸಿಬ್ಬಂದಿಯ ಸಂಪೂರ್ಣ ಸಹಾಯ ಸಹಕಾರವಿಲ್ಲದೆ ನಿಗಧಿತ ಪ್ರಗತಿ ಸಾಧಿಸುವುದು ಕಷ್ಟಸಾಧ್ಯವೆಂಬುದನ್ನು ಒಪ್ಪಬೇಕಾಗುತ್ತದೆ. ಅಲ್ಲದೇ ಆರೋಪಿತ ಅಧಿಕಾರಿಯು ಯಾವುದೇ ಹಣ ದುರುಪಯೋಗ ಮಾಡಿರುವ, ಅಕ್ರಮ ಎಸಗಿರುವ ಬಗ್ಗೆ ಅಥವಾ ಕಳಪೆ ಕಾಮಗಾರಿ ಮಾಡಿರುವಂತಹ ಗಂಭೀರ ಸ್ವರೂಪದ ಆರೋಪಗಳಿರುವುದಿಲ್ಲ. ಹಾಗಾಗಿ ಸದರಿ ಅಧಿಕಾರಿಯವರ ವಿವರಣೆಯನ್ನು ಪರಿಗಣಿಸಬಹುದಾಗಿದ್ದು, ಸದರಿಯವರು ನರೇಗಾ ಯೋಜನೆಯ ಅಕುಶಲ ಕಾರ್ಮಿಕರಿಗೆ ದಿನಗೂಲಿ ಪಾವತಿಸುವಲ್ಲಿ ವಿಳಂಬ ಮಾಡಿರುವ ಅಂಶವನ್ನು ಪರಿಗಣಿಸಿ ದಂಡನೆಯನ್ನು ವಿಧಿಸಲು ಮತ್ತು ಇವರ ಅಮಾನತ್ತನ್ನು ತೆರವುಗೊಳಿಸಿ ಅವರ ಸೇವೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಸೇವೆಗಳು–'ಎ'ಶಾಖೆ)ಗೆ ಹಿಂದಿರುಗಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 13 ವಿಸೇಬಿ 2016, ಬೆಂಗಳೂರು ದಿನಾಂಕ: 11.03.2016</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಶ್ರೀ ಬಸಯ್ಯ ಹಿರೇಮಠ್, ಹಿಂದಿನ (ಪ್ರಭಾರ) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸುರಪುರ, ಯಾದಗಿರಿ ಜಿಲ್ಲೆ, ಇವರ ಅಮಾನತ್ತನ್ನು ತೆರವುಗೊಳಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೂ ಅಧಿಕಾರಿಯ ಸೇವೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಸೇವೆಗಳು–ಎ ಶಾಖೆ)ಗೆ ಹಿಂದಿರುಗಿಸಿದೆ.

ಶ್ರೀ ಬಸಯ್ಯ ಹಿರೇಮಠ್, ಕಾರ್ಯನಿರ್ವಾಹಕ ಅಧಿಕಾರಿಯ ಹುದ್ದೆಯ ಪ್ರಭಾರದಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ನರೇಗಾ ಯೋಜನೆಯ ಅಕುಶಲ ಕಾರ್ಮಿಕರಿಗೆ ದಿನಗೂಲಿ ಪಾವತಿಸುವಲ್ಲಿ ವಿಳಂಬ ಮಾಡಿರುವ ಅಂಶವನ್ನು ಪರಿಗಣಿಸಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾಳಿಗಳು 1957ರ ನಿಯಮ 8(ii)ರನ್ವಯ ವಾಗ್ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/3/16

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು–ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**<u>ಗೆ:-</u>**

1. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ
4. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಸೇವೆಗಳು–ಎ), ಬೆಂಗಳೂರು.
5. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಇವರ ಮುಖಾಂತರ)

**<u>ಪ್ರತಿಯನ್ನು ಮಾಹಿತಿಗಾಗಿ:-</u>**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ~~ವಿಶೇಷಾಧಿಕಾರಿ~~, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.